# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 258/2023

| | | |
|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ವಿಶ್ವರೂಪ್ | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಲೇ.ಶಿವಣ್ಣ | 30.09.2024 |
| ವಯಸ್ಸು | ಃ 37 ವರ್ಷ | |
| ವೃತ್ತಿ | ಃ ಹೋಟೇಲ್ ಕೆಲಸ | ಪ್ರಾ.ಸಾ. ಃ 07 |
| ವಾಸಸ್ಥಳ | ಃ ಕುಂಬಾರ ಕೊಪ್ಪಲು | ಚಾ.ಸಾ. ಃ 04 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. *2023* ರ ಮೇ ತಿಂಗಳಲ್ಲಿ ಒಂದು ದಿನ ನನಗೆ ಮಹಜರ್ ಗೆ ಬರುವಂತೆ ನೋಟಿಸ್ ಕೊಟ್ಟಿದ್ದರು. ಈಗ ನಾನು ನೋಡುತ್ತಿರುವ ನೋಟಿಸ್ ಅದೇ ಇರುತ್ತದೆ ಅದರಲ್ಲಿ ನನ್ನ ಸಹಿ ಇದೆ. ಸದರಿ ನೋಟಿಸ್ ಅನ್ನು ನಿ.ಪಿ-*16* ಮತ್ತು ಸಹಿಯನ್ನು ನಿ.ಪಿ-*16*(ಎ) ಎಂದು ಗುರುತಿಸಿದೆ. ನಂತರ ಅದೇ ದಿನ ನಾನು ಪೋಲೀಸ್ ಠಾಣೆಗೆ ಹೋದಾಗ ಅಲ್ಲಿ ಕೋರ್ಟ್ ಮುಂದೆ ಇರುವ ಆರೋಪಿತ ಹಾಜರಿದ್ದರು. ಆ ಕಾಲಕ್ಕೆ ಆರೋಪಿತ ತಾನು ನಡೆಸುತ್ತಿದ್ದ ಬೇಕರಿಯಲ್ಲಿ ರಾಮೇಗೌಡ ಇವರ ಹೆಂಡತಿಗೆ ಹೊಡೆದು ಸಾಯಿಸಿದ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದರು. ನಂತರ ಆರೋಪಿತ ಸಿದ್ದಲಿಂಗಪುರದಲ್ಲಿ ತಾನು ನಡೆಸುತ್ತಿದ್ದ ಬೇಕರಿ ಬಳಿ ಕರೆದುಕೊಂಡು ಹೋಗಿದ್ದ. ಆಗ ಅಲ್ಲಿ ತಾನು ಹೊಡೆದು ಸಾಯಿಸಿದ ಸ್ಥಳವನ್ನು ತೋರಿಸಿದ್ದ ಆಗ ಅಲ್ಲಿ ಪೋಲೀಸರು ಮಹಜರ್ ಮಾಡಿದ್ದರು. ಆ ಕಾಲಕ್ಕೆ ಆರೋಪಿತ ಒಂದು ಪಪ್ಸ್ ಮಾಡುವ

ಅಲ್ಯೂಮಿನಿಯಂ ರಾಡನ್ನು ತೋರಿಸಿ ಅದರಿಂದಲೇ ಹೊಡೆದಿದ್ದಾಗಿ ಹೇಳಿದ್ದ. ರಾಡಿಗೆ ರಕ್ತ ಹತ್ತಿತ್ತು. ಆ ಕಾಲಕ್ಕೆ ಪೋಲೀಸರು ಆ ರಾಡನ್ನು ಮತ್ತು ನೆಲಕ್ಕೆ ಹಾಕಿದ್ದ ಮ್ಯಾಟ್ ಅನ್ನು ಅಮಾನತ್ತು ಪಡಿಸಿಕೊಂಡಿದ್ದರು. ಸಂಜೆ *4* ರಿಂದ *6* ಗಂಟೆ ವರೆಗೆ ಅಲ್ಲಿ ಮಹಜರ್ ಮಾಡಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*9* ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*9(ಬಿ)* ಎಂದು ಗುರುತಿಸಿದೆ. ಆ ಕಾಲಕ್ಕೆ ಪೋಲೀಸರು ಆ ಬೇಕರಿಗೆ ಹಾಕಿದ್ದ ಕೀ ಅನ್ನು ತೆಗೆದಿದ್ದರು. ಆ ದಿನ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ *4* ಪೊಟೋಗಳನ್ನು ಆ ಬೇಕರಿಯಲ್ಲಿ ಮಹಜರ್ ಕಾಲಕ್ಕೆ ತೆಗೆದಿದ್ದರು. ಸದರಿ ಪೊಟೋಗಳನ್ನು ನಿ.ಪಿ-*17* ರಿಂದ *20* ಎಂದು ಗುರುತಿಸಿದೆ. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ರಾಡು ಆ ದಿನ ಆರೋಪಿತ ತೋರಿಸಿದಾಗ ವಶಕ್ಕೆ ಪಡೆದ ರಾಡು ಇದೆ. ಸದರಿ ರಾಡನ್ನು ಎಂ.ಒ-*5* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಬಾಟಲ್ ಆ ದಿನ ಗಟ್ಟಿಯಾಗಿದ್ದ ರಕ್ತ ಸಂಗ್ರಹಿಸಿದ್ದ ಬಾಟಲ್ ಇದೆ. ಸದರಿ ಬಾಟಲ್ ಅನ್ನು ಎಂ.ಒ-*6* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಮ್ಯಾಟ್ ಆ ಮಹಜರ್ ಕಾಲಕ್ಕೆ ವಶಪಡಿಸಿಕೊಂಡ ಮ್ಯಾಟ್ ಇದೆ. ಸದರಿ ಮ್ಯಾಟ್ ಅನ್ನು ಎಂ.ಒ-*7* ಎಂದು ಗುರುತಿಸಿದೆ. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು